ಶ್ರೀ ಎಂ. ಎಸ್. ಜೋಯಿಸರು.—ದುಡ್ಡಿಲ್ಲದಿದ್ದರೆ, ಸಾಧ್ಯವಿಲ್ಲ ಎಂದು ಭಾವಿಸೋಣವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ದುಡ್ಡಿಲ್ಲದೆ ಅನೇಕ ಯೋಜನೆಗಳು ನಿಂತುಹೋಗಿವೆ. ದುಡ್ಡು ಬಂದರೆ ಸಾಮಾನುಗಳನ್ನು ಒದಗಿಸಿಕೊಂಡು ಕೆಲಸ ಪೂರ್ತಿ ಮಾಡುತ್ತೇವೆ.

ಶ್ರೀ ಎಂ. ಎಸ್. ಜೋಯಿಸರು.—ಈಗಿರುವಹಾಗೆ ದುಡ್ಡಿಲ್ಲ. ಮುಂದೆ ದುಡ್ಡು ಬಂದರೆ ಮಾತ್ರ ಮಾಡುವುವುದಕ್ಕೆ ಸಾಧ್ಯವಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇರುವ ದುಡ್ಡಿನಲ್ಲೇ ಮಾಡುವುದಕ್ಕೆ ಆಗುವ ಹಾಗಿದ್ದರೆ ಪ್ರಯತ್ನಪಡುತ್ತೇವೆ.

ಶ್ರೀ ಎಂ. ಎಸ್. ಜೋಯಿಸರು.—ಇರುವ ದುಡ್ಡಿನಲ್ಲೇ ಮಾಡಬೇಕೆಂಬ ಮನಸ್ಸಿದ್ದಲ್ಲಿ ಭರವಸೆ ಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮನಸ್ಸಿದ್ದರೂ ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಜೋಯಿಸರು.—ಎಂದರೆ ಆದರೂ ಆಗಬಹುದು, ಇಲ್ಲದೇ ಹೋದರೂ ಹೋಗಬಹುದು ಎಂತಲೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ತಮ್ಮ ಅಭಿಪ್ರಾಯ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ದುಡ್ಡಿಲ್ಲದೇ ಇರುವುದು ನಿಧಾನವಾಗಿರುವುದಕ್ಕೆ ಕಾರಣವಾದರೆ ಯಾರಿಗೆ ಪವರ್ ಬೇಕೋ ಅವರು ಹಣವನ್ನು ಕಾಂಟ್ರಿಬ್ಯೂಟ್ ಮಾಡಿದರೆ ಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಒಬ್ಬಬ್ಬರು ದುಡ್ಡು ಕೊಡುವುದರಿಂದ ಆಗುವುದಿಲ್ಲ. ಏನಾದರೂ ಒಂದು ಯೋಜನೆ ಮಾಡಿ, ಜನರಿಂದ ಪಬ್ಲಿಕ್ ಫಂಡ್ ಶೇಖರಿಸುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಆಲೋಚನೆ ಮಾಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಯಾರ್ಯಾರಿಗೆ ಪವರ್ ಬೇಕೋ ಅವರೆಲ್ಲಾ ಒಪ್ಪಿಕೊಂಡು ಸಾಲದ ರೂಪದಲ್ಲಿ ಕಾಂಟ್ರಿಬ್ಯೂಷನ್ ಕೊಟ್ಟರೆ ಆ ಲೈನನ್ನು ಮಂಜೂರುಮಾಡುವುದಕ್ಕೆ ಸರ್ಕಾರವಮರು ಯೋಚನೆ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಊಹಾಪ್ರಶ್ನೆ ಆಯಿತು. ಆ ರೀತಿ ಒಂದು ಯೋಜನೆ ಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹಾಗಾದರೆ ಆ ತತ್ವವನ್ನು ಒಪ್ಪಿಕೊಂಡು ಆ ರೀತಿ ಮಾಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಲೋಚನೆ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಎಸ್. ರಂಗರಾಯರು (ಚಿತ್ರದುರ್ಗ ಜಿಲ್ಲೆ).—ಕ್ಯಾಬಿನೆಟ್‌ನಲ್ಲಿ ಮಾಡುತ್ತೇವೆ ಎಂಬ ಭರವಸೆ ಕೊಡುತ್ತೀರಾ ಎಂದು ಒಬ್ಬ ಮಾನ್ಯ ಸದಸ್ಯರು ಕೇಳಿದರು. ಇದೇ ರೀತಿ ಕ್ಯಾಬಿನೆಟ್‌ನಲ್ಲಿ ಮಾಡುತ್ತೇವೆ ಅಥವಾ ಬಡುತ್ತೇವೆ ಎಂದು ಹೇಳುವುದು ತಪ್ಪಾಗುವುದಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒತ್ತಾಯಪಡಿಸುತ್ತೇವೆ ಎಂದು ಹೇಳುವುದು ತಪ್ಪಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ನಮ್ಮ ಸಂಸ್ಥಾನಕ್ಕೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಿಲ್ಲದಿರುವಾಗ ಹೊರ ಪ್ರಾಂತ್ಯಗಳಿಗೆ ಏಕೆ ಕೊಡುತ್ತೀರಿ ?

ಅಧ್ಯಕ್ಷರು.—ಇದು ಹೊರ ಪ್ರಾಂತ್ಯಗಳಿಗೆ ಕೊಡುವ ಪ್ರಶ್ನೆಯಲ್ಲ. ಲಕ್ಕವಳ್ಳಿಗೆ ಸಂಬಂಧಪಟ್ಟದ್ದು.

ಶ್ರೀ ಎಚ್. ಸಿದ್ದವೀರಪ್ಪನವರು.—It is a part of our State. ವಿದ್ಯುಚ್ಛಕ್ತಿಯನ್ನು ಹೊರಗೆ ಕೊಡುತ್ತಿದ್ದಾರೆ, ಅದಕ್ಕೋಸ್ಕರ ಕೇಳಿದೆ.

Mr. SPEAKER.—Next question. Sri G. Veerappa. The Hon'ble Member is not present. Question No. 213 will be treated as an unstarred question.

Next question. Sri K. R. Madhava Rao. The Hon'ble Member is not present. Question No. 158 will be treated as an unstarred question.

Questions No. 9, No. 19, No. 20, No 224 in the V set. The Hon'ble Chief Minister is not present. They will be taken up later.

Next question. Sri M. Govinda Reddy.

Handing over State-managed industries to private agencies.

*Q.—21. Sri M. GOVINDA REDDY (Chitaldrug District—General).—

Will the Government be pleased to state :—

(*a*) whether they are contemplating handing over State-managed industries to private agencies ;

(*b*) if so, the exact nature of the terms and conditions on which the industries are proposed to be handed over ?

*A.—The Hon'ble Sri H. C. DASAPPA (Minister for Finance and Industries).—

(*a*) and (*b*). The desirability of gradually transferring the ownership and management of some of the Government industrial concerns to Joint-Stock Companies is under consideration of the Government. No decision has yet been taken in regard to the number or nature of the concerns to be so transferred or the terms and conditions of transfer; nor has any general policy been formulated in the matter.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸ್ಟೇಟ್ ಮ್ಯಾನೇಜ್‌ಡ್ ಇಂಡಸ್ಟ್ರೀಗಳನ್ನು ಪ್ರೈವೇಟ್ ಏಜೆನ್ಸಿಗೆ ಕೊಡುವುದನ್ನು ಯೋಚನೆಮಾಡುತ್ತಿದ್ದೇವೆ ಎಂದು ಉತ್ತರ ಕೊಡಲಾಗಿದೆ. ಅದರಲ್ಲಿ ಎಲ್ಲಾ ಕೈಗಾರಿಕೆಗಳನ್ನು ಖಾಸಗೀ ಸಂಸ್ಥೆಗಳಿಗಾಗಲೀ, ಜನರಿಗಾಗಲೀ ವಹಿಸಬೇಕೆಂದಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಯಾವುದಾದರೂ ಕೆಲವು ಕೈಗಾರಿಕೆಗಳನ್ನು ವಹಿಸಬೇಕೆಂದಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾವ ಯಾವುದನ್ನು ವಹಿಸಬೇಕೆಂ ಬುದು ಪರ್ಯಾಲೋಚನೆ ಯಲ್ಲಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಯಾವ ಯಾವ ಕೈಗಾರಿಕೆಗಳನ್ನು ವಹಿಸಬೇಕೆಂದು ಆಲೋಚನೆ ಇದೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇನ್ನೂ ಒಂದು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬಂದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಖಾಸಗೀ ಸಂಸ್ಥೆಗಳಿಗೆ ವಹಿಸುವಾಗ ಯಾವ ಆಧಾರದ ಮೇಲೆ ವಹಿಸಬೇಕೆಂದಿದ್ದೀರಿ; ಏನಾದರೂ ಪರತ್ತು ಗಳಿವೆಯೇ?

ಮಾನ್ಯ ಶ್ರಿ ಎಚ್. ಸಿ. ದಾಸಪ್ಪನವರು.—ಕನ್ಸೂರಿ ಬಾಯ್ ಲಾಲ್‌ಬಾಯ್‌ರವರು ಬಂದಿದ್ದಾಗ ಒಂದು ಸಲಹೆ ಕೊಟ್ಟಿದ್ದಾರೆ. ಲ್ಯಾಕ್ ಅಂಡ್ ಪೇಂಟ್ ವರ್ಕ್ಸ್ ಮತ್ತು ಐ. ಟಿ. ಎಲ್. ಮೊದಲಿನಿಂದಲೂ ಕೊಟ್ಟಿದ್ದೇವೆ. ಇನ್ನೂ ಕೆಲವು ಸೂಚನೆಗಳು ಬಂದಿವೆ. ಹೊಸ ಸಲಹೆಗಳನ್ನು ಯೋಚನೆಮಾಡುತ್ತಾ ಇದ್ದೇವೆ. ಯಾವುದೂ ತೀರ್ಮಾನವಾಗಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ವರಮಾನ ಕೊಡತಕ್ಕ ಕೈಗಾರಿಕಾ ಸಂಸ್ಥೆಗಳನ್ನು ಖಾಸಗಿ ಯವರಿಗೆ ವಹಿಸಿಕೊಡಬೇಕೆಂದು ನಿರ್ಧರಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾವುದೂ ನಿರ್ಧರವಾಗಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ವರಮಾನ ಕೊಡತಕ್ಕ ಸಂಸ್ಥೆಗಳನ್ನು ಸರ್ಕಾರದವರೇ ನಡೆಸಿ ಕೊಂಡು ಬರಬಹುದು ಎನ್ನುವ ವಿಷಯದಲ್ಲಿ ಸರ್ಕಾರ ದವರಿಗೆ ಅನುಮಾನವಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ವರಮಾನ ಬರುತ್ತಾ ಇದ್ದರೂ ಕೂಡ ಅದನ್ನು ನಾವು ಒಂದು ಜಾಯಿಂಟ್ ಸ್ಟಾಕ್ ಕಂಪನಿ ಆಗಿ ಮಾಡಿದರೆ ಅದಕ್ಕೆ ಬರತಕ್ಕ ಲಾಭ, ಗುಡ್‌ವಿಲ್ ಇವೆಲ್ಲಾ ಇನ್ನೂ ಚೆನ್ನಾಗಿ ಬರಬಹುದು. ಅದನ್ನು ಬೇರೆ ಇನ್ನೊಂದು ಹೊಸ ಕೈಗಾರಿಕೆಯ ಮೇಲೆ ಇನ್‌ವೆಸ್ಟ್ ಮಾಡಬಹುದು. ಇದ ನ್ನೆಲ್ಲಾ ಯೋಚನೆ ಮಾಡುತ್ತಾ ಇದ್ದೇವೆ. ಯಾವುದೂ ತೀರ್ಮಾನಮಾಡಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ವಿಷಯ ದಲ್ಲಿ ಇಂಡಿಯಾ ಸರ್ಕಾರದವರಿಂದಲೇನಾದರೂ ಸಲಹೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಏನೂ ಅವಶ್ಯಕವಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ವಿಷಯ ದಲ್ಲಿ ಸಂಬಂಧಪಟ್ಟ ಇಲಾಖೆಯವರೊಡನೆ ಏನಾದರೂ ಪರ್ಯಾಲೋಚನೆ ಮಾಡೋಣವಾಗಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರಿಂದ ಲೇ ಇನ್ನು ಮೇಲೆ ಸಲಹೆಗಳನ್ನು ತರಿಸಿಕೊಳ್ಳಬೇಕು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ವಿಷಯ ದಲ್ಲಿ ಸರ್ಕಾರದವರು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮುಂಚೆ ಈ ಸಭೆಯ ಅಭಿಪ್ರಾಯವನ್ನು ಪಡೆಯು ತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರ ಅಭಿಪ್ರಾಯ ಈಗಲೇ ಕೊಡಬಹುದು. ನಮ್ಮ ಅಭಿಪ್ರಾ ಯವನ್ನು ಹೊರಗೆ ಹಾಕಿದ್ದಾಗಿದೆ. ನೀವುಗಳೂ ನಿಮ್ಮ ಅಭಿಪ್ರಾಯವನ್ನು ತಿಳಿಸಬಹುದು. ಇದಲ್ಲದೆ ಕೈಗಾ ರಿಕಾ ಸಲಹಾ ಸಮಿತಿಯವರನ್ನು ಕೂಡ ಸಲಹೆ ಕೇಳ ಬಹುದಾಗಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಕೈಗಾರಿಕೋದ್ಯಮಗಳನ್ನು ಖಾಸಗಿ ಸಂಸ್ಥೆಗಳ ವರು ಮಾಡಿದರೆ ಸರ್ಕಾರದವರಿಗಿಂತ ಚೆನ್ನಾಗಿ ನಡೆಸು ತ್ತಾರೆಂದು ತೀರ್ಮಾನಮಾಡಿದ್ದೀರಾ?

ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಖಾಸಗಿ ಸಂಸ್ಥೆಗಳವರಿಗೆ ವಹಿಸಬೇಕೆಂದು ಹೇಳುವುದಕ್ಕೇನು ಕಾರಣ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಂಥ ವಿಷಯಗಳಲ್ಲಿ ಯಾವಾಗಲೂ ಇರುವ ದೊಂದು ನೀತಿಯೇ ನೆಂದರೆ, ಮೂಲ ಕೈಗಾರಿಕೋದ್ಯಮಗಳನ್ನು ಮುಖ್ಯ ವಾಗಿ ಸರ್ಕಾರದವರು ನಡೆಸುವುದು ಸೂಕ್ತ. ಬಾಕಿ ಕೈಗಾರಿಕೆಗಳನ್ನು ಸಾಧಾರಣವಾಗಿ ಖಾಸಗೀ ಜನ ರಿಗೆ ಬಿಡಬೇಕು; ಆದರೆ ಎಲ್ಲ ಖಾಸಗಿಯವರು ಯಾವು ದಾದರೂ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಮುಂದೆ ಬರುವುದಿಲ್ಲವೋ, ಅಲ್ಲಿ ಸರ್ಕಾರದವರು ಅಂಥ ಕೈಗಾರಿಕೆಗಳನ್ನು ಪ್ರಾರಂಭಮಾಡಿ ಕ್ರಮೇಣ ಅದು ರೂಢಿಗೆ ಬಂದ ಮೇಲೆ ಜಾಯಿಂಟ್ ಸ್ಟಾಕ್ ಸಂಸ್ಥೆ ಆಗಿ ಮಾಡಿ ಖಾಸಗಿಯವರಿಗೆ ವಹಿಸಬೇಕು ಎಂಬುದು ಎಲ್ಲರೂ ಒಪ್ಪತಕ್ಕ ಒಂದು ನೀತಿಯೊಹಿದೆ. ಸರ್ಕಾರದವರೂ ಅದನ್ನು ಒಪ್ಪಿದ್ದಾರೆ. ಆದ್ದರಿಂದ ಸರ್ಕಾರದವರು ಮಾಡಿದ್ದು ಚೆನ್ನಾಗಿ ನಡೆಯುವುದಿಲ್ಲ, ಖಾಸಗಿಯವರು ಮಾಡಿದ್ದು ಚೆನ್ನಾಗಿ ನಡೆಯುತ್ತದೆಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಪ್ರತಿ ಯೊಂದು ಕೈಗಾರಿಕೆಯನ್ನೂ ರಾಷ್ಟ್ರೀಕರಣ ಮಾಡುವ ನೀತಿಯನ್ನು ಅವಲಂಬಿಸಬೇಕಾದ್ದಿಲ್ಲ ಅಲ್ಲವೇ?

ಮಾನ್ಯ ಶ್ರೀ ಎಚ್. ಸಿ ದಾಸಪ್ಪನವರು.—ಅಂ ಥಾದ್ದು ಇಲ್ಲವೇ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈ ಕೈಗಾರಿಕೆಗಳಲ್ಲಿ ಅನೇಕವು ಲುಕ್ರಾನಾಗುತ್ತವೆಂದು ತಾನೆ ತಾವೀಗ ಅವನ್ನು ಬೇರೆಯವರಿಗೆ ವಹಿಸಬೇಕೆಂದಿರುವುದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಲುಕ್ರಾ ನಾಗುತ್ತವೆಂಬುದನ್ನು ಒಪ್ಪುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈಗ ಅನೇಕ ಕೈಗಾರಿ ಕೆಗಳು ಸರ್ಕಾರದವರಿಂದ ನಡೆಸಲ್ಪಡುತ್ತಿರುವುದರಿಂದ ಲುಕ್ರಾನಾಗುತ್ತಿದೆಯೆಂಬುದು ಗೊತ್ತಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೇ ನೂ ಇಲ್ಲ. ಸರ್ಕಾರದವರಿಂದ ಲುಕ್ರಾನಾಗುತ್ತಿದೆ ಯೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ತಾವು ಹೀಗೆ ಖಾಸಗಿ ಯವರಿಗೆ ವಹಿಸಬೇಕಾದರೆ ಈ ಸಭೆಯವರ ತೀರ್ಮಾನ ವನ್ನು ತೆಗೆದುಕೊಂಡು ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಾಧಾ ರಣವಾಗಿ ಇಂಥಾ ಕೈಗಾರಿಕೋದ್ಯಮಗಳ ವಿಚಾರದಲ್ಲಿ ಒಂದು ಸರ್ವಸಾಮಾನ್ಯ ನೀತಿಯೇನಿರಬೇಕೆಂಬುದನ್ನು ಗೊತ್ತುಪಡಿಸಬಹುದೇ ಹೊರತು, ಆ ರೀತಿಯಾಗಿ ಮಾ ಡುವುದು ಸೂಕ್ತವೇ ಅಲ್ಲವೇ ಎಂದು ಕೇಳಬಹುದೇ ಹೊರತು, ಒಂದೊಂದು ಉದ್ಯಮವನ್ನೂ ವರ್ಗಾಯಿಸು ವುದಕ್ಕೆ ಮುಂಚೆ ಈ ದೊಡ್ಡ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡೇ ಮಾಡಬೇಕೆಂಬುದು ಸರಿಯಾದ ನೀತಿ ಯಲ್ಲ.

Sri V. M. MASCARENHAS (Retroceded Area-General)--Are any applications now pending before the Government from any persons requesting to hand over any of these industries?

The Hon'ble Sri H. C. DASAPPA.— As soon as this idea got abroad a number of applications are coming in. But we are not considering any application.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸರ್ಕಾರಿ ಕೈಗಾರಿಕೋದ್ಯಮಗಳನ್ನು ಖಾಸಗಿಯವರಿಗೆ ವಹಿಸಬೇಕೆಂಬ ಯೋಚನೆ ತಮ್ಮಲ್ಲಿ ಯಾವಾಗಿನಿಂದ ಇತ್ತೆಂಬ ದನ್ನು ಹೇಳುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬಹಳ ವರ್ಷಗಳಿಂದಲೂ ಇದೆ.

ಶ್ರೀ ಎಚ್. ಸಿ. ಸಿದ್ದವೀರಪ್ಪನವರು.—ಸರ್ಕಾರದ ವರ ನೀತಿಯೇ ಅದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ನೀತಿ ಗನುಸಾರವಾಗಿಯೇ ಐ. ಟಿ ಎಲ್. ಲ್ಯಾಕ್ ಮತ್ತು ಪೇಂಟ್ಸ್ ಕೈಗಾರಿಕೆಗಳನ್ನು ಖಾಸಗಿಯವರಿಗೆ ಕೊಟ್ಟಿರುವುದು. ಹಾಗೆಯೇ ಸಾಬೂನಿನ ಕಾರ್ಖಾನೆಯನ್ನೂ ಕೂಡ ಒಂದಾನೊಂದು ಕಾಲದಲ್ಲಿ ಖಾಸಗಿಯವರಿಗೆ ಕೊಡಬೇಕೆಂದು ತೀವ್ರವಾಗಿ ಆಲೋಚನೆ ಮಾಡಿತ್ತು.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಕೈಗಾರಿಕೆಗಳಲ್ಲಿ ಯಾವುದನ್ನಾದರೂ ಖಾಸಗಿಯವರಿಗೆ ಕೊಡಬೇಕೇ ಬೇಡವೇ ಎಂಬ ತತ್ವದ ವಿಚಾರದಲ್ಲಿ ಈ ಸಭೆಯ ಅಭಿಪ್ರಾಯವನ್ನು ತಿಳಿದುಕೊಂಡು ಮಾಡುತ್ತೇವೆಂದು ಭರವಸೆ ಕೊಡುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗ ನಡೆಯುತ್ತಿರುವ ಚರ್ಚೆಯೇ ಆ ಉದ್ದೇಶವನ್ನು ನಡೆಸಿಕೊಡುತ್ತಿದೆ. ಆ ತತ್ವವನ್ನು ಯಾರು ಬೇಕಾದರೂ ಪ್ರಶ್ನೆಯ ರೂಪದಲ್ಲಾಗಲೀ, ನಿರ್ಣಯದ ರೂಪದಲ್ಲಾಗಲೀ ಅಥವಾ ಇನ್ನಾವುದಾದರೂ ರೀತಿಯಲ್ಲಾಗಲೀ ಈ ಸಭೆಯಲ್ಲಿ ಮಂಡಿಸಬಹುದು. ಸಾಮಾನ್ಯವಾಗಿ ಸರ್ಕಾರದವರು ಯಾವುದಾದರೊಂದು ನೀತಿಯನ್ನು ಪ್ರಕಟಪಡಿಸಿದರೆ ಅದರ ವಿಚಾರದಲ್ಲಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಂಪೂರ್ಣ ಹಕ್ಕಿದೆ. ನಾವು ಆಗಾಗ್ಗೆ ಕೊಡುವ ಹೇಳಿಕೆಗಳೇ ಮಾನ್ಯ ಸದಸ್ಯರಿಗೆ ಸಾಕಾದಷ್ಟು ಸೂಚನೆ ಕೊಟ್ಟ ಹಾಗೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಯಾವಾಗ ಬೇಕಾದರೂ ವ್ಯಕ್ತಪಡಿಸಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಬಗ್ಗೆ ಸರ್ಕಾರದವರು ಒಂದು ವಿಶೇಷ ನಿರ್ಣಯವನ್ನು ಸಭೆಯ ಮುಂದಿಟ್ಟು ಸರ್ಕಾರದವರು ನಡೆಸುತ್ತಿರತಕ್ಕ ಕೈಗಾರಿಕೆಗಳನ್ನು ಖಾಸಗಿಯವರಿಗೆ ವರ್ಗಾಯಿಸುವುದಕ್ಕೆ ಈ ಸಭೆಯ ಒಪ್ಪಿಗೆಯಿದೆಯೇ ಇಲ್ಲವೇ ಎಂದು ತಿಳಿದು ಕೊಳ್ಳುವುದಕ್ಕೆ ಪ್ರಯತ್ನಪಡುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ರೀತಿಯಾಗಿ ಮಾಡುವ ವಾಡಿಕೆ, ಪದ್ಧತಿ—ಯಾವುದೂ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯೇನಾದರೂ ಹೀಗೆ ವರ್ಗಾವಣೆ ಯಾಗುವುದು ನಿಮ್ಮ ಗಮನದಲ್ಲಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ಖಾಸಗಿಯವರಿಗೆ ಕೊಡಬೇಕೇ ಇಲ್ಲವೇ ಎಂಬ ಅಭಿಪ್ರಾಯ ತಮ್ಮ ಮುಂದಿತ್ತೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈ ಒಂದು ವಿಷಯವನ್ನು ವಿಮರ್ಶಿಸುವಾಗ ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

Sri H. M. CHANNABASAPPA (Mysore District—General).—Are the Government aware that this question involves a change of policy?

The Hon'ble Sri H. C. DASAPPA.— It is not a change of policy, but it is a policy which has been there for very many years.

Sri H. M. CHANNABASAPPA.—My question is, whether the transfer of some of these industries to private agencies will not involve a change of policy.

The Hon'ble Sri H. C. DASAPPA.— The policy as I said is already there. There is no change of policy. The answer I have given is 'no'. It is open to the Hon'ble Members to express their views on the policy.

Sri H. M. CHANNABASAPPA.— The present policy, as I understand, is to continue the management of the industries they have. If they are thinking of transferring these industries to private agency, it is a question that involves a change of policy. Is it not?

The Hon'ble Sri H. C. DASAPPA.— Sir, it is an argument. I think he must take the answer when I say that there is no change of policy.

Sri H. M. CHANNABASAPPA.—Are the Government aware that whenever there is a change of policy, sanction of the legislature is necessary?

Mr. SPEAKER.— The Hon'ble Minister says that there is no change of policy.

Sri H. M. CHANNABASAPPA.— Whenever there is a change of policy at least?

Mr. SPEAKER.—It is a hypothetical question. The Hon'ble Minister says that there is no change of policy.

Sri H. M. CHANNABASAPPA.— I should like to know whether the Government are aware that sanction of the legislature is necessary for change of policy.

Mr. SPEAKER —That will become a hypothetical question. He says there is no change in the policy.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಖಾಸಗಿಯವರು ಯಾವ ಕೈಗಾರಿಕೆಗಳನ್ನು ಕೈಗೊಳ್ಳದೆ ಬಿಟ್ಟಿದ್ದಾರೋ ಅಂಥವುಗಳನ್ನು ತಾನೆ ಸರ್ಕಾರದವರು ಕೈಕೊಳ್ಳುವುದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಾಧಾರಣವಾಗಿ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗಾದರೆ ಸರ್ಕಾರದವರು ಕೈಕೊಳ್ಳಬೇಕೆಂದು ಅವರ ಗಮನದಲ್ಲಿರುವ ಯೋಜನೆಗಳು ಯಾವುವು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಖಾಸಗಿ ಸಂಸ್ಥೆಯವರಿಗೆ ಸರ್ಕಾರಿ ಕೈಗಾರಿಕೆಗಳನ್ನು ವಹಿಸಬೇಕೇ ಬೇಡವೇ ಎನ್ನುವುದು ಈಗಿರುವ ಪ್ರಶ್ನೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಖಾಸಗಿಯವರು ಯಾವುದಾದರೂ ಹೊಸ ಉದ್ಯಮವನ್ನು ಕೈಗೊಂಡಿದ್ದರೆ ಅಂಥಾದ್ದಕ್ಕೆ ಯಾವ ಸಹಾಯವನ್ನು ಕೊಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಬೇರೆ ಪ್ರಶ್ನೆ. That is a general question. ಸಾಧಾರಣವಾಗಿ ಇದುವರೆಗೂ ಯಾವ್ಯಾವ ಸಹಾಯಗಳನ್ನು ಕೊಡುತ್ತಿದೆಯೋ ಅವುಗಳನ್ನು ಮುಂದೆಯೂ ಕೊಡಬೇಕೆಂಬುದೇ ನಮ್ಮ ನೀತಿ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅಂಥಾದ್ದು ಯಾವುದಾದರೂ ತಮ್ಮ ಗಮನಕ್ಕೆ ಬಂದರೆ ತಾವು ಸಹಾಯ ನೀಡುತ್ತೀರಾ ?

ಅಧ್ಯಕ್ಷರು.—ಆ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಸ್. ಜೋಯಿಸ್‌ರವರು (ಮೈಸೂರು ಜಿಲ್ಲೆ).—ಸರ್ಕಾರದಿಂದ ಪೋಷಿತವಾದ ಕೈಗಾರಿಕಾ ಸಂಸ್ಥೆಗಳನ್ನು ಖಾಸಗಿಯವರಿಗೆ ಕೊಡಿಸತಕ್ಕ ಯಾವ ಬಗೆಯ ನೀತಿಯನ್ನು ಇವತ್ತು ತಾವು ವ್ಯಕ್ತಪಡಿಸಿದರೋ, ಆ ನೀತಿ ಯಾವಾಗಲಾದರೂ ಈ ಸಭೆಯಲ್ಲಾಗಲೀ ಅಥವಾ ಹಿಂದಿನ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಾಗಲೀ ಒಪ್ಪಿಗೆ ಪಡೆದಿತ್ತೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ಪಡೆದಿರುವುದು ನನ್ನ ತಿಳಿವಳಿಕೆಗೆ ಬಂದಿಲ್ಲ.

ಶ್ರೀ ಎಂ. ಎಸ್. ಜೋಯಿಸ್‌ರವರು.—ಹಾಗೆ ಒಪ್ಪಿಗೆ ಪಡೆಯದಿರುವ ಒಂದು ನೀತಿಯನ್ನು ಸರ್ಕಾರದವರು ಇವತ್ತಿನ ದಿವಸ ಕಾರ್ಯಾಚರಣೆಯಲ್ಲಿಟ್ಟಿದ್ದೀರಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾವಾಗ ಒಂದು ನೀತಿಯನ್ನು ಹಿಂದೆ ಅನುಸರಿಸುತ್ತಿದ್ದು, ಹಾಗೆ ಅನುಸರಿಸುತ್ತಿರುವುದಕ್ಕೆ ಭಿನ್ನಾಭಿಪ್ರಾಯ ಬಂದಿಲ್ಲವೋ, ಅಲ್ಲಿಗೆ ಆ ನೀತಿಗೆ ಎಲ್ಲರ ಒಪ್ಪಿಗೆ ಮುದ್ರೆ ಬಿತ್ತು ಎಂದು ಸರ್ಕಾರದವರ ಅಭಿಪ್ರಾಯ.

ಶ್ರೀ ಎಂ. ಎಸ್. ಜೋಯಿಸ್‌ರವರು.—ಹಿಂದಿನ ರೀತಿ ನೀತಿಗಳನ್ನು ಬದಲಾವಣೆ ಮಾಡಬೇಕೆಂದು ಒಂದು ಪ್ರಜಾಪ್ರಭುತ್ವ ಆದಳಿತ ನೀತಿಯನ್ನು ಜಾರಿಗೆ ಹೊಸದಾಗಿ ತಂದಿದ್ದರೂ, ಹಿಂದಿನ ನೀತಿಯನ್ನೇ ಅನುಸರಿಸುತ್ತಾ; ಆ ಹಿಂದಿನ ನೀತಿಯನ್ನೇ ಈಗಲೂ ಮುಂದುವರಿಸಿಕೊಂಡು ಹೋಗಬೇಕೆಂಬುದು ಸರ್ಕಾರದವರ ಅಭಿಪ್ರಾಯವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸರ್ಕಾರದವರ ಆಡಳಿತವೆಲ್ಲಾ ಹಾಗೆಯೇ ನಡೆದುಕೊಂಡು ಬರುತ್ತಿದೆ.

ಶ್ರೀ ಎಂ. ಎಸ್. ಜೋಯಿಸ್‌ರವರು.—ಸರ್ಕಾರದವರ ಆಡಳಿತವೆಲ್ಲಾ ಹಾಗೆಯೇ ನಡೆದುಕೊಂಡು ಬರುತ್ತಿದೆಯಾದ್ದರಿಂದ, ಆ ನೀತಿಯನ್ನು ಬದಲಾವಣೆ ಮಾಡುವಾಗ ಆ ವಿಷಯವನ್ನು ಈ ಸಭೆಯ ಮುಂದೆ ತರಬೇಕೆಂಬ ಅಂಶವನ್ನು ತಾವು ಮನಗಂಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈ ವಾದದ ತರಹ, ಸ್ವರೂಪ ಅದೇ ಆಗಿದೆ. ನಾನಾಗಲೇ ಹೇಳಿದ್ದೇನೆ : ಇಂಥಾದ್ದು ಯಾವಾಗಲಾದರೂ ಮಾಡಬೇಕಾದರೆ ಮುಂಚೆ ಸರ್ಕಾರದವರಿಂದ ಒಂದು ಹೇಳಿಕೆ ಹೊರಪಡುತ್ತೆ. ಅದೇ ಸೂಚನೆಯನ್ನು ತಗೆದುಕೊಂಡು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವೇನೆಂಬುದನ್ನು ಇರತಕ್ಕ ಅವಕಾಶ ಕಲ್ಪಿಸಿಕೊಂಡು ತಿಳಿಸಬಹುದು.

ಶ್ರೀ ಎಂ. ಎಸ್. ಜೋಯಿಸರು.—ಈ ನೀತಿಗೆ ಸಂಬಂಧಪಟ್ಟ ಹೇಳಿಕೆಯನ್ನು ಸರ್ಕಾರದವರು ಯಾವಾಗ ಎಲ್ಲಿ ಕೊಟ್ಟಿದ್ದಾರೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾವ ವಿಷಯದಲ್ಲಿ ಹೇಳಿಕೆ ?

ಶ್ರೀ ಎಂ. ಎಸ್. ಜೋಯಿಸರು.—ಸರ್ಕಾರಕ್ಕೆ ಸೇರಿರುವ ಕೈಗಾರಿಕೆಗಳನ್ನು ಖಾಸಗಿ ಜನರಿಗೆ ಕೊಡತಕ್ಕ ನೀತಿಯನ್ನು ವ್ಯಕ್ತಪಡಿಸಿರುವ ಹೇಳಿಕೆ.

ಅಧ್ಯಕ್ಷರು.—ಆಗಲೇ ಹೇಳಿದ್ದಾರೆ, ಹಿಂದೆ ಈರೀತಿ ಮಾಡಿದ್ದಾರೆಂದು ಉದಾಹರಣೆಯನ್ನು ಕೊಟ್ಟಿದ್ದಾರೆ.

Sri M. N. JOIS.—It is reply to a question. Government must make a statement of their policy. This is not a statement that he is making now.

ಅಧ್ಯಕ್ಷರು.—ಆ ವಿಷಯದಲ್ಲೇ ಹೇಳಿದ್ದಾರೆ.

Sri M. N. JOIS.—It is an answer to an interpellation. It is not a statement of policy made by the Government. That is what I am telling.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಗಲೇ ಜಾರಿಯಲ್ಲಿ ಇರತಕ್ಕ ನೀತಿಯನ್ನು ಅನುಸರಿಸುತ್ತಿದ್ದೇವೆಯೇ ಹೊರತು ಹೊಸದಾದ ನೀತಿಯನ್ನೇನೂ ಈಗ ಪ್ರಾರಂಭ ಮಾಡುತ್ತಿಲ್ಲ. ಆದರೆ ಈ ನೀತಿಯನ್ನು ಯಾವ ರೀತಿ ಕಾರ್ಯರಂಗಕ್ಕೆ ತರಬೇಕೆಂಬುದು ಸರ್ಕಾರದ ಪರ್ಯಾಲೋಚನೆಯಲ್ಲಿದೆ ಎಂದು ಹೇಳಿದ್ದೇನೆ.

ಶ್ರೀ ಎಂ. ಎಸ್. ಜೋಯಿಸರು.—ಸರ್ಕಾರದ ಈ ನೀತಿಗೆ ಅನ್ವಯಿಸದೇಯಿರುವ key industries ಯಾವುದಾದರೂ ಇವೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇವೆ, ವಿದ್ಯುಚ್ಛಕ್ತಿ, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮುಂತಾದುವು.

ಶ್ರೀ ಎಂ. ಎಸ್. ಜೋಯಿಸರು.—ಗಂಧದ ಎಣ್ಣೆ ಕೈಗಾರಿಕೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಧ್ಯದಲ್ಲಿ ಅದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಎಸ್. ಜೋಯಿಸರು.—ಸಧ್ಯದಲ್ಲಿ ಹೋಗುವುದಿಲ್ಲವೆಂದರೆ, ಯಾವಾಗ ಹೋಗುತ್ತೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ, ಭವಿಷ್ಯದ ವಿಚಾರಕ್ಕೆಲ್ಲಾ ಜೋಯಿಸರನ್ನು ಕೇಳಬೇಕು (ನಗು !!).

ಶ್ರೀ ಎಂ. ಎಸ್. ಜೋಯಿಸರು.—ಆ ನೀತಿಯ ವಿಚಾರದಲ್ಲಿ ಈ ಸಭೆಯಲ್ಲಿ ಭಿನ್ನಾಭಿಪ್ರಾಯವಿದೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಎಂ. ಎಸ್. ಜೋಯಿಸರು.—ಈಗ ಭಿನ್ನಾಭಿಪ್ರಾಯವಿದೆಯೆಂದು ಹೇಳಿದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಒಪ್ಪುವುದಿಲ್ಲ.

ಶ್ರೀ ಎಂ. ಎಸ್. ಜೋಯಿಸರು.—ಈಗ ಭಿನ್ನಾಭಿಪ್ರಾಯವಿದೆಯೆಂದು ಗೊತ್ತಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅದು ಪ್ರಶ್ನೆಗಳಿಂದ ಗೊತ್ತಾಗುವುದಿಲ್ಲ, ಚರ್ಚೆಯಿಂದ ಗೊತ್ತಾಗಬಹುದು.

ಶ್ರೀ ಎಂ. ಎಲ್. ಜೋಯಿಸರು.—ಈಗ ಸರ್ಕಾರಕ್ಕೆ ನೇರಿರತಕ್ಕ ಕೈಗಾರಿಕೆಗಳನ್ನು ತಮಗೆ ಕೊಡಬೇಕೆಂದು ಬಂದಿರುವ ಅರ್ಜಿಗಳನ್ನು ತೀರ್ಮಾನ ಮಾಡುವಾಗ ಕೈಗಾರಿಕೆ ಸಮಿತಿಯ ಮುಂದಾದರೂ ಇಟ್ಟು, ಅವರ ಅಭಿಪ್ರಾಯ ಪಡೆದು ತೀರ್ಮಾನ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಆ ಸಮಿತಿಯವರ ಸಲಹೆಯನ್ನೂ ಕೇಳುತ್ತೇವೆಂದು ಆಗಲೇ ಉತ್ತರ ಕೊಟ್ಟಿದೆ.

ಶ್ರೀ ಎಂ. ಎಲ್. ಜೋಯಿಸರು.—ಹಾಗೆ ಮಾಡುತ್ತೇವೆಂದು ಖಂಡಿತವಾಗಿ ಹೇಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿ ದಾನಪ್ಪನವರು.—ಸಾಧಾರಣವಾಗಿ ಮಾಡಬಹುದೆಂದು ಹೇಳಿದರೆ, ಮಾಡುತ್ತಾರೆಂಬ ಭರವಸೆಯನ್ನು ಇಟ್ಟುಕೊಳ್ಳಬಹುದು.

Sri H. C. LINGA REDDY (Kolar District—General).—What are the reasons for the Government to think of transferring some of the State-owned industries to private agencies ?

The Hon'ble Sri H. C. DASAPPA.—I have already explained that, Sir. There are certain classes of industries which must be State-owned and which must be nationalised. There are other industries covering a large field and as per the present policy the Government do not think it desirable to continue to manage them. And therefore it is better to leave them to private enterprises. It may be that at the beginning they will be shy to come forward to start those industries. Therefore the Government start the industries and having started them and having taken them up to a certain stage, they just want to welcome private enterprise and get back the capital and use it for starting fresh industries. Is it not a good policy ? You can thereby develop industries. Possibly, it might have been better if the Government had done it earlier. But still it is a good policy.

Sri H. C. LINGA REDDY.—Is it the policy to transfer non-key industries to private agencies ?

The Hon'ble Sri H. C. DASAPPA.—Not so specifically. Whenever desirable, whenever practicable, whenever feasible, these things are done.

Sri H. C. LINGA REDDY.—Will the Government transfer any State industry which is incurring loss ?

The Hon'ble Sri H. C. DASAPPA.—Good heavens ! If you start transferring only industries which are working under loss, you will not get people to take them up. The wiser course is to bring them to a successful working order. Any way I do not want to commit myself to anything. We will just, as and when circumstances permit, as and when people come forward to take up these industries and as and when we are sure that they will go into safe and reliable hands, hand them over.

Sri H. C. LINGA REDDY.—Does it mean that the State would transfer some of the income-yielding industries also ?

The Hon'ble Sri H. C. DASAPPA.—There is nothing to prevent the Government from doing it.

Sri H. C. LINGA REDDY.—Will it not be a loss to the State if those industries which are yielding income are transferred ?

The Hon'ble Sri H. C. DASAPPA.—Far from loss, it may be even very helpful because you get some money for the goodwill which may be useful for starting fresh industries.

Sri H. C. LINGA REDDY.—Are the Government aware that when it is found that some of the industries have got to be taken over by the Government, the idea of transferring State-owned industries to private agency is not helpful ?

The Hon'ble Sri H. C. DASAPPA.—It is not our policy ; at any rate, it is definitely not the policy of Mysore Government to nationalise industries in the State.

Sri G. A. ACHARYA (Bangalore District—General).—I would like to know whether the Government will, before coming to a final decision, study the working results of each industry.

The Hon'ble Sri H. C. DASAPPA.—All circumstances, including working results.

Sri G. A. ACHARYA.—Sir, you said that you can possibly get more money by transferring industries ; are you hoping to get money in excess over the small investment that you have made on these industries ?

The Hon'ble Sri H. C. DASAPPA.—No sir. I must once again make it clear. I think it is not merely getting money. The idea is to get sufficient money which we can invest on some new industry. That is the main thing. We have got these industries and if we do not have more money we cannot start new industries where private capital is shy. So the idea is to get money released from the transfer of these concerns and then utilise it for starting other industries.

Sri G. A. ACHARYA.—Am I to understand that you want to sell old industries in exchange for loan?

The Hon'ble Sri H. C. DASAPPA.—There is no question of selling them.

Sri D. M. SIDDAIYA (Mysore District—General). What industries are you contemplating to transfer to private agencies?

The Hon'ble Sri H. C. DASAPPA.—It has been answered already.

Sri D. M. SIDDAIYA.—What new industries are in the offing?

The Hon'ble Sri H. C. DASAPPA.—That we cannot say. We have not decided anything about it.

Sri D. M. SIDDAIYA.—You have said just now that it is very profitable to get money by transfer of industries to start fresh industries. Does it not hamper the interests of the State?

The Hon'ble Sri H. C. DASAPPA.—If anything, it is going to vastly assist the interests of the State.

Sri D. M SIDDAIYA.—Does it not amount to enriching individuals at the cost of the State?

The Hon'ble Sri H. C. DASAPPA.—Not a bit. The State is there to help people in the State to raise their standard of living, earn more money, use their talents and all that. Your question surprises me very much.

Sri D. M. SIDDAIYA.—By transferring State industries to individuals .....

The Hon'ble Sri H. C. DASAPPA.—Not individuals. We say 'private ownership'. We do not propose to give it to individuals. It will be a joint stock company.

Sri V. S. NARAYANA RAO (Bangalore City—General Urban).—Will it not go against the principle of nationalisation?

The Hon'ble Sri H. C. DASAPPA.—There is no principle of nationalisation to which this Government are committed.

Working of the Mysore Implements Factory at Hassan.

*Q.—43. **Sri H. SIDDANANJAPPA** (Hassan District—General).—

Will the Government be pleased to state:—

(*a*) whether the Mysore Implements Factory at Hassan is working profitably (statement of accounts for the last five years is required);

(*b*) if it is not working profitably, why it is so;

(*c*) whether they have thought of any measures for its improvement;

(*d*) whether they have any intention to hand it over to any private agency?

A.—**The Hon'ble Sri H. C. DASAPPA** (Minister for Finance and Industries).—

(*a*) Except in the year 1940-41 when the Factory incurred a loss of Rs. 4,600 and in 1941-42, when the results just balanced, the factory has been making profits.

A statement of production, sales and profits for the five years ending March 1950 is printed below.

(*b*) The fall in profit in recent years is due mainly to rising costs of raw materials without corresponding increases in the price of finished products, competition from other producers more favourably placed in regard to raw materials like the Tata Agricultural Implements Factory being very keen.

Working by manual labour without mechanising the manufacturing operations also increases cost and this is another factor responsible for reduced profits.

(*c*) Yes. Development Schemes to mechanise operations, reduce costs and increase manufacture of products in keen demand, have been worked out and are proposed to be implemented in stages according to availability of funds.